ನಗರದ ನಡುವೆಯೇ ಇರುವ ಕಂಪನಿಯಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ್ದ ಶ್ರುತಿ ಅಂದು ಬಸ್ ತಪ್ಪಿಸ್ಕೊಂಡು ಯಾವಾಗಲೂ ಬರುತ್ತಿದ್ದ ದಾರಿಬಿಟ್ಟು, ಊರೆಲ್ಲ ಸುತ್ತಿ ಬರುವ ಬಸ್ ಹಿಡಿಯಬೇಕಾಗಿ ಬಂತು. ಓದುವಷ್ಟು ದಿನ ಕ್ಯಾಂಪಸ್ಸಿನಲ್ಲಿ ಇದ್ದು, ಅಲ್ಲಿ ಇಲ್ಲಿ ಹೋಗುವಾಗ ಗೆಳೆಯ ಗೆಳತಿಯರ ಕಾರಿನಲ್ಲಿ ಸುತ್ತುತ್ತಿದ್ದರಿಂದ, ಮಹಾನಗರದ ಸದ್ದು ಗದ್ದಲದ ನಡುವೆ ಇರುವ ಯೂನಿವರ್ಸಿಟಿಯಾದ್ದರಿಂದ ಇದುವರೆಗೆ ಕಾರಿನ ಅವಶ್ಯಕತೆ ಎಂದೂ ಎದ್ದು ಕಂಡಿರಲಿಲ್ಲ. ಸದಾ ಸಿಗುವ ಬಸ್, ಮೆಟ್ರೋ, ಟ್ರಾಮ್‌ಗಳಿಂದಾಗಿ ಎಂದೂ ಪ್ರಯಾಣಕ್ಕೆ ಅಡ್ಡಿ ಎನ್ನುವಂತ ಪ್ರಸಂಗವೇ ಬರಲಿಲ್ಲ. ಅಮೆರಿಕದಲ್ಲಿ ಕಾರಿಲ್ಲದಿದ್ದರೆ ಜೀವನವೇ ಇಲ್ಲ ಎನ್ನುತ್ತಿದ್ದ ಎಲ್ಲರಿಗೂ ತಾನಿರುವ ಪ್ರದೇಶಕ್ಕೆ, ತನ್ನ ತಾನಾಯಿತು ತನ್ನ ಪಾಡಾಯಿತು ಎಂಬಿರುವಂತ ಪ್ರವೃತ್ತಿಗೆ ಕಾರೇನೂ ಬೇಕಾಗಿಲ್ಲ ಎಂದೇ ಹೇಳಿದ್ದಳವಳು. ಅಂತೆಯೇ ಯೂನಿವರ್ಸಿಟಿ ಹತ್ತಿರದ ಅಪಾರ್ಟ್‌ಮೆಂಟಿನ ವಾಸ್ತವ್ಯವನ್ನು ಬದಲಿಸಲಿಲ್ಲ. ಹುಟ್ಟಿ

